ಕಟ್ಟಿಹಾಕಿಕೊಂಡಿರುತ್ತಾನೆ" ಎಂದರು. ಅಳಿಯ ಅಲ್ಲ ಮಗಳ ಗಂಡ ಎನ್ನುವಂತಿದೆ ನಿಮ್ಮ ಮಾತು ಎಂದು ಹೇಳಬೇಕೆಂದುಕೊಂಡವನು, ಎಷ್ಟೇ ಆದರೂ ರಕ್ತ ಕೊಟ್ಟವರಲ್ಲವೇ, ಹಾಗೆ ಹೇಳುವುದು ಮರ್ಯಾದೆ ಅಲ್ಲವೆಂದು ಹೇಳಲು ಹೋಗಲಿಲ್ಲ.

ಇನ್ನೂ ಸ್ವಲ್ಪ ಹೊತ್ತು ಮಾತನಾಡಿ ಆತ ಹೊರಟುಹೋದರು. ಅಲ್ಲಿಯವರೆಗೂ ಮುಳ್ಳಿನ ಮೇಲೆ ಕುಳಿತಂತಿದ್ದ ನಾವು ಒಮ್ಮೆಲೇ ಆರಾಮವಾದೆವು. ಹೋಗುತ್ತಿರುವ ಆತನತ್ತ ದುರುದುರು ನೋಡುತ್ತಾ ನನ್ನ ಹೆಂಡತಿ, "ಇಷ್ಟು ಕಥೆ ಹೇಳ್ತಾನಾ? ನಿನಗೆ ರಕ್ತ ಕೊಡೋಕ್ಕೆ ಹತ್ತು ಸಾವಿರ ತೆಗೆದುಕೊಂಡ" ಎಂದಳು.

ಬೇಸ್ತು ಬೀಳುವುದು ಈಗ ನನ್ನ ಸರದಿಯಾಗಿತ್ತು. ನಂತರ ನಮ್ಮ ಮಾತಿನ ವಿಷಯ ರಕ್ತದ ಮಾರಾಟ, ಕಿಡ್ನಿ ಮಾಫಿಯಾಗಳತ್ತ ಹೊರಳಿತು.

ಅಷ್ಟರಲ್ಲಿ ನರ್ಸ್ ಬಂದು "ಅರೆರೆ! ಮುರಾರಿ ಬಾಬು ಹೊರಟುಹೋದರಾ?" ಎಂದು ಕೇಳಿದಳು.

"ಅವರು ನಿಮಗೆ ಗೊತ್ತಾ?" ನನ್ನ ಹೆಂಡತಿ ಅಂದಳು.

"ಗೊತ್ತಿಲ್ಲದೇ ಏನು? ಅಪರೂಪದ ರಕ್ತದ ಗುಂಪಿನೋರು. ದುಡ್ಡಿದವರಿಗೆ ರಕ್ತ ಮಾರಿ, ಆ ದುಡ್ಡಿನಿಂದ ಬಡವರಿಗೆ ರಕ್ತ ಖರೀದಿ ಮಾಡಿ ಕೊಡ್ತಾರೆ. ಯಾವಾಗಲೂ ಇಲ್ಲೇ ಇರುತ್ತಾರೆ" ಎಂದು ಹೇಳಿದಳು.

ನಾನು, ನನ್ನ ಹೆಂಡತಿ ಮುಖಮುಖ ನೋಡಿಕೊಂಡೆವು.

***

ಆ ರಾತ್ರಿ ನಾನು ನಿದ್ರಿಸಲಿಲ್ಲ. ನನ್ನೊಳಗೆ ಏನೋ ಫಟಾರ್ ಎಂದು ಒಡೆಯಿತು ಎನ್ನುವ ದೊಡ್ಡ ಮಾತು ಹೇಳುವುದಿಲ್ಲ. ಆದರೆ ಮುರಾರಿ ಹೇಳಿದ ಸ್ನೇಹ, ಆರಾಧನೆ ಮುಂತಾದ ಬಂಧಗಳ ಬಗ್ಗೆ ಆತ ಹೇಳಿದ ವಿವರಣೆಯನ್ನು ಮತ್ತೆ ಮತ್ತೆ (ಈ ಸಲ ಹೊಸದಾಗಿ) ಮನನ ಮಾಡಿಕೊಂಡೆ. ಸ್ನೇಹದ ಬಗ್ಗೆ, ಭಕ್ತಿಯ ಬಗ್ಗೆ, ಆ ಕೃಷ್ಣನ ಬಗ್ಗೆ, ಈ ಮುರಾರಿ ಹೇಳಿದ ಪ್ರತಿ ಅಕ್ಷರವೂ ನೆನಪಿತ್ತು.

"ಭಗವಂತನೊಂದಿಗೆ ಸ್ನೇಹಕ್ಕಿಂತ ಶ್ರೇಷ್ಠವಾದದ್ದು ಮತ್ತೇನಿದೆ? ಭಗವಂತನೊಂದಿಗೆ ಸ್ನೇಹ ಮಾಡು. ಗೋಪಬಾಲರು ಯಾರು? ತಪಶ್ಶಕ್ತಿಯಿಂದ ಪುನೀತರಾದ ಮನುಷ್ಯರು. ಆ ಪುಣ್ಯದ ಫಲಿತದಿಂದಾಗಿಯೇ ಕೃಷ್ಣನೊಂದಿಗೆ ಜಳಕವಾಡಿದರು. ಬೆನ್ನ ಮೇಲೆ ಹತ್ತಿ ನದಿಗೆ ಹಾರಿದರು. ಕುರುಕ್ಷೇತ್ರ ಯುದ್ಧದಲ್ಲಿ ಕೃಷ್ಣ ಅರ್ಜುನನ ರಥಸಾರಥಿ. ಯುದ್ಧ ಸಮಯದಲ್ಲಿ ಅಶ್ವಗಳ ಹೇಶಾರವದಲ್ಲಿ, ಆನೆಗಳ ಘೀಳಿನಲ್ಲಿ ಅಕ್ಕಪಕ್ಕದವರ ಮಾತುಗಳು ಕೇಳಿಸುವುದಿಲ್ಲ. ವಾಮಪಾದದಿಂದ ಎಡಭುಜವನ್ನು ಹೊಡೆದರೆ ರಥವನ್ನು ಅತ್ತ, ಬಲಗಾಲಿನಿಂದ ಹೊಡೆದರೆ ಇತ್ತ ತಿರುಗಿಸಬೇಕು. ಕೃಷ್ಣ ಆ ರೀತಿಯಲ್ಲಿಯೇ ರಥ ನಡೆಸಿದ. ಕೃಷ್ಣ ತನ್ನ ನಿಜರೂಪ ತೋರಿಸಿದಾಗ "ಓ ದೇವದೇವಾ! ನೀನು ಭಗವಂತನಾ? ನಿನ್ನನ್ನಾ ನಾನು ಕಾಲಿನಿಂದ ಒದ್ದದ್ದು?" ಎಂದು ಅರ್ಜುನ ಗೋಳಾಡುತ್ತಾನೆ. ಕೃಷ್ಣ ಆಪ್ಯಾಯತೆಯಿಂದ ನಕ್ಕು "ನೀನು ನನ್ನ ಸಖ. ಸ್ನೇಹಿತನಾದ ನೀನಲ್ಲದಿದ್ದರೆ ಹೇಗೆ ಹೋಗಬೇಕೆಂದು ನನಗೆ ಯಾರು ಹೇಳುತ್ತಾರೆ? ಒದೆಯುವಂತಹ ಸಲಿಗೆ ಇನ್ಯಾರಿಗಿರಲು ಸಾಧ್ಯ?" ಎಂದೆನ್ನುತ್ತಾನೆ.

ಭಗವಂತನೊಂದಿಗೆ ಸ್ನೇಹ ಅಂದರೆ ಇದು. ನೀನು ನಿಜವಾದ ಸ್ನೇಹಿತನಾದರೆ "ಎಲ್ಲಿ ನನ್ನ ಆಸ್ತಿ" ಎಂದು ಬೈದರೆ ಬೆದರುತ್ತಾ ಬಂದು ನಿನ್ನ ಆಭರಣಗಳನ್ನು ನಿನಗೆ ಕೊಡುತ್ತಾನೆ. ನೀನು ನಿಜವಾದ ಭಕ್ತನಾಗಿದ್ದರೆ ಕಾಪಾಡಲು ಬೇಗನೆ ಬಾ ಎಂದು ನೀನು ಕರೆದರೆ, ಹೆಂಡತಿಯೊಂದಿಗಿನ ಸರಸವನ್ನು ನಿಲ್ಲಿಸಿ ಓಡಿ ಬರುತ್ತಾನೆ.

ಭಕ್ತಿಯಿಂದ ಧ್ಯಾನಿಸು. ಕೆಲಸ ಮಾಡಲು ಬೇಕಾದ ಶಕ್ತಿಯನ್ನು ಒಟ್ಟುಗೂಡಿಸುವುದಕ್ಕಾಗಿ ಮಾಡುವುದು ಧ್ಯಾನ. ಅಷ್ಟೇ ಹೊರತು, ಮೂಗು ಮುಚ್ಚಿಕೊಂಡು ಪ್ರಜ್ಞೆ ಕಳೆದುಕೊಳ್ಳುವುದೂ, ಆ ಭ್ರಮೆಯಲ್ಲಿ ದೇವರನ್ನು ನೋಡುವುದೂ ಅಲ್ಲ. ಮಾಡುವ ಕೆಲಸ ಮೇಲೆ ಏಕಾಗ್ರತೆಯಿಂದ ದೃಷ್ಟಿ ನಿಲ್ಲಿಸಿಕೊಳ್ಳುವುದು ಧ್ಯಾನ. ದೇವರ ಮೇಲೆ ಭಕ್ತಿಯೂ, ಚಪ್ಪಲಿಗಳ ಮೇಲೆ ಚಿತ್ತವೂ ಇದ್ದರೆ ಏನು ಪ್ರಯೋಜನ? ಧ್ಯಾನದಿಂದ ಏಕಾಗ್ರತೆ ಹೆಚ್ಚುತ್ತದೆ. ಮಾಡುತ್ತಿರುವ ಕೆಲಸದ ಹೊರತಾಗಿ ಬೇರೇನೂ ನೆನಪಲ್ಲಿ ಇರದಿರುವುದು ಏಕಾಗ್ರತೆ. ಪಕ್ಷಿಯ ಕಣ್ಣಿನ ಹೊರತಾಗಿ ಬೇರೇನೂ ಕಂಡು ಬರದಿರುವುದೇ ಏಕಾಗ್ರತೆ. ಅದು ಬರಬೇಕೆಂದರೆ ಕೆಲಸದ ಬಗ್ಗೆ ಆರಾಧನೆ ಇರಬೇಕು. ಅಂದವಾದ ಹೆಣ್ಣಿನ ಚಿತ್ರ ಬರೆದು ಮುಖದ ಮೇಲೆ ಚುಕ್ಕಿ ಎಲ್ಲಿಡಲಿ ಎಂದು ಅಹೋರಾತ್ರಿ ತಪಿಸುವುದು ಚಿತ್ರಕಾರನಿಗೆ ತನ್ನ ಕೆಲಸ ಮೇಲಿರುವ ಆರಾಧನೆ. ರಾಧೆಗೆ ಕೃಷ್ಣನ ಬಗೆಗಿನ ಆರಾಧನೆ ಅದೇ. ರಾಧ ಹೆಸರಿನಲ್ಲೇ ಇದೆ ಅಲ್ಲವಾ? ಅದೇ ತಾದಾತ್ಮ್ಯತೆ.

ತಾದಾತ್ಮ್ಯತೆಗೆ ಮಹಾನ್ ಉದಾಹರಣೆ ಪ್ರಹ್ಲಾದ. ಇದರಲ್ಲಿರುವನು. ಇಲ್ಲವೆಂಬ ಸಂದೇಹವು ಬರಕೂಡದು ಎನ್ನುತ್ತಾನೆ. ನರಸಿಂಹ ಮನುಷ್ಯನಲ್ಲೂ ಇರುತ್ತಾನೆ. ಕಲ್ಲು ಕಂಬದಲ್ಲಿಯೂ ಇರುತ್ತಾನೆ. ಮಾನವ ಸೇವೆಯೇ ದೈವಸೇವೆ ಎಂದಿದ್ದಾರೆ. ಕಲ್ಲಿಗೆ ಪೂಜೆ ಮಾಡುವುದು ನಿನ್ನ ಆನಂದ. ಜೊತೆಯ ಮನುಷ್ಯನಿಗೆ ಸೇವೆ ಮಾಡುವುದು ದೇವನಿಗೆ ಆನಂದ.

ಭಗವಂತನನ್ನು ನಂಬು. ನಂಬಿಕೆಯಿಂದ ಕೆಲಸ ಮಾಡು. ಅವನೆಲ್ಲಿದ್ದಾನೆ? ನಿನ್ನಲ್ಲಿಯೇ. ನಂಬಿಕೆಗೆ ವಾರಸುದಾರ ಆಂಜನೇಯ. ಸಂಜೀವನಿ ತೆಗೆದುಕೊಂಡು ಬಾ ಎಂದರೆ ಹಿಮಾಲಯವನ್ನೇ ತಂದುಬಿಡುತ್ತಾನೆ. ಹನುಮಾ..! ನಾನು ಹೇಳಿದೊಡನೆ ಇದು ಸಾಧ್ಯವಾ ಅಲ್ಲವಾ ಎಂದು ಆಲೋಚಿಸದೇ ಆ ಕೆಲಸಕ್ಕೆ ಹೊರಟುಬಿಡುತ್ತೀ ಅಲ್ವಾ. ನಿನಗೇನೂ ಅನುಮಾನಗಳಿರೋಲ್ವಾ? ಎಂದು ರಾಮ ಕೇಳುತ್ತಾನೆ. ರಾಮಾ, ನೀನು ನನಗೆ ಒಂದು ಕೆಲಸ ಹೇಳಿರುವೆ ಎಂದರೆ, ಆ ಶಕ್ತಿ ಕೂಡ ನೀನೇ ಕೊಡುವೆ ಎಂಬ ನಂಬಿಕೆ ನನಗಿದೆ ಎನ್ನುತ್ತಾನೆ ಆಂಜನೇಯ. ನಿನ್ನಲ್ಲಿರುವ ಭಗವಂತನ ಮೇಲೆ ನಂಬಿಕೆ ಇಲ್ಲದೇ ಎಷ್ಟು ಯಜ್ಞಗಳನ್ನು ಮಾಡಿದರೂ ಏನು ಪ್ರಯೋಜನ? ಹುಂಡಿಯಲ್ಲಿ ಎಷ್ಟು ದುಡ್ಡು ಹಾಕಿದರೆ ಏನು ಲಾಭ? ಹುಂಡಿ ಎನ್ನುವುದು ಕೇವಲ ನಿನ್ನ ಆನಂದ ಮಾತ್ರವೇ.

ಭಗವಂತನನ್ನು ಪ್ರಾರ್ಥಿಸುವುದೆಂದರೆ, ನಿನ್ನ ಜೊತೆ ಅವನು ಸೃಷ್ಟಿಸಿದ ಸಕಲ ಚರಾಚರಗಳನ್ನು ಪ್ರೀತಿಸುವುದು. ಅವರೆಲ್ಲರೂ ನಿನ್ನ ಒಡಹುಟ್ಟಿದವರು, ನಿನ್ನ ಸೋದರರು. ಅವರ ಬಗ್ಗೆ ವಾತ್ಸಲ್ಯ ತೋರಿಸು. ಪ್ರಕೃತಿಯನ್ನು ಪ್ರೀತಿಸು. ತಾದಾತ್ಮ್ಯತೆಯನ್ನು ಹೊಂದು. ನಿನ್ನ ಪ್ರೇಮ ವಿಶ್ವಜನೀಯವಾದರೆ, ಆ ಪ್ರೇಮಕ್ಕಾಗಿ ಭಗವಂತ ನಿನ್ನ ಮುಂದೆ ಕೈ ಚಾಚಿ ನಿಲ್ಲುತ್ತಾನೆ. ಯಶೋದೆಗೆ ಅಷ್ಟು ವಾತ್ಸಲ್ಯವಿದ್ದುದರಿಂದಲೇ ಬಾಯಿ ತೋರಿಸೆಂದರೆ ವಿನಯವಾಗಿ ಕೈಗಳನ್ನು ಕಟ್ಟಿಕೊಂಡು ತೋರಿಸಿದ. ಅಯ್ಯೋ ನಿನ್ನ ಮಗ ಇದ್ದಾನಲ್ಲಾ..! ಎಂದು ನೆರೆಹೊರೆಯವರು ದೂರಿತ್ತಾಗ ಒರಳುಕಲ್ಲಿಗೆ ಕಟ್ಟಿದ್ದರೂ ಆ ದಿವ್ಯ ಮಂಗಳನು ಸೊಲ್ಲೆತ್ತಲಿಲ್ಲ.

ಭಗವಂತ ನಿನಗೆ ದುಡ್ಡು ಸ್ವಲ್ಪ ಹೆಚ್ಚಿಗೆ ಕೊಟ್ಟಿರುವನೆಂದರೆ ಅದನ್ನು ನಿನ್ನ ಸಹಚರರಿಗೆ ಹಂಚಲಿ ಎಂಬುದಕ್ಕಾಗಿ. ನನಗೆ ಅಪರೂಪದ ರಕ್ತ ಕೊಟ್ಟಿರುವನೆಂದರೆ ಅದನ್ನು ಇತರರಿಗೆ ನೀಡಲಿಕ್ಕೆಂದು. ಜ್ಞಾನ ಕೊಟ್ಟಿರುವನೆಂದರೆ ಸ್ವಲ್ಪ ಆಲೋಚನೆ ಮಾಡೆಂದು. ಇಷ್ಟು ರೀತಿಯಾಗಿ ಭಗವಂತನಿಗೆ ಸ್ನೇಹಿತನಾಗಿ, ಆರಾಧಕನಾಗಿ, ಸಖನಾಗಿ ವಾತ್ಸಲ್ಯದಿಂದ ಇರುವಾಗ ನನಗೆ ಭಗವಂತ ಹೊಸದಾಗಿ ಏನು ಕೊಡುತ್ತಾನೆಂದು, ಏನು ಮಾಡುತ್ತಾನೆಂಬುದು ನಿಮ್ಮ ಉದ್ದೇಶ?" ಎಂದು ಅಲ್ಲಿಂದ ಹೊರಟುಹೋದ.

ಆ ರಾತ್ರಿಯೆಲ್ಲಾ ಅದನ್ನೇ ಯೋಚಿಸಿದೆ.

***

ಬೆಟ್ಟದ ಮೇಲೆ ದೀಪಗಳನ್ನು ಇಡುವ ಕಾರ್ಯಕ್ರಮ ದಿಗ್ವಿಜಯವಾಗಿ ಮುಗಿಯಿತು. ಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿ ಖರ್ಚಾಯಿತಂತೆ. ಅನೇಕ ವೃತ್ತಪತ್ರಿಕೆಗಳೂ, ಛಾನೆಲ್‌ಗಳೂ ಅದಕ್ಕೆ ಬಹಳ ಪ್ರಚಾರ ಕೊಟ್ಟವು. ನಾನು ಹೋಗಲಿಲ್ಲ. ಭಗವಂತನಿಗೆ ಹೇಗೆ ಹತ್ತಿರವಾಗಬೇಕೋ. ಮುರಾರಿಬಾಬು ಹೇಳಿದ ಆ ಎಂಟು ಮಾರ್ಗಗಳನ್ನು ನಮ್ಮ ಗುಂಪಿಗೆ ಕೂಡ ಹೇಳಿದೆ. ಅವರೂ ತಾರ್ಕಿಕವಾಗಿ ಆಲೋಚಿಸುವಂತಹವರೇ. ನಂತರ ಆ ಮಾತುಗಳಿಗೆ ಬದ್ಧರಾಗಿ ನಿಲ್ಲುವರೋ ಇಲ್ಲವೋ ತಿಳಿಯದು. ಆದರೆ, ಪ್ರಸ್ತುತಕ್ಕೆ ನಾನು ಹೇಳಿದ್ದನ್ನು ಅರ್ಥ ಮಾಡಿಕೊಂಡರು.

ನಾಲ್ಕು ದಿನಗಳ ನಂತರ, ಬೆಳ್ಳಂಬೆಳಗ್ಗೆಯೇ "ನೀವೆಲ್ಲಾ ದುಡ್ಡು ಹಾಕಿ ನನ್ನ ಮಗನ ಕಣ್ಣುಗಳನ್ನು ಸರಿ ಮಾಡಿಸಿದಿರಯ್ಯಾ. ಏನು ಮಾಡಿದರೆ ನಿಮ್ಮ ಋಣ ತೀರುತ್ತೆ" ಎನ್ನುತ್ತಾ ನನ್ನ ಬಳಿಗೆ ಬಂದು ನಮಸ್ಕರಿಸಿದಳು ಕೆಲಸದಾಕೆ. ಕೃತಜ್ಞತೆಯಿಂದ ಅವಳ ಮಗ ನನ್ನತ್ತ ನೋಡುತ್ತಿದ್ದ.

ಬೆಟ್ಟದ ಮೇಲೆ ಲಕ್ಷಾಂತರ ದೀಪಗಳು ಬೆಳಗುತ್ತಿದ್ದವು.

ನನ್ನ ಮುಂದಿದ್ದ ಎರಡು ನಕ್ಷತ್ರಗಳೂ ಮತ್ತಷ್ಟು ಪ್ರಕಾಶಮಾನವಾಗಿದ್ದವು.

ಹಿಂದೆಯೇ ಬಂದ ನನ್ನ ಹೆಂಡತಿ ಮಂದಸ್ಮಿತ ನನ್ನನ್ನು ನೋಡಿ ಮೊದಲನೇ ಸಲ ನಕ್ಕಳು.

ಪ್ರತಿಕ್ರಿಯಿಸಿ: feedback@sudha.co.in